(ಸಾಕ್ಷಿಯನ್ನು ದಿನಾಂಕಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರುಃ ಶ್ರೀ ರವರಿಂದ</u>**

ನನ್ನ ಅಜ್ಜಿ ಚೌಡಮ್ಮರವರಿಗೆ ಇಬ್ಬರು ಮಾತ್ರ ಗಂಡು ಮಕ್ಕಳಿರುತ್ತಾರೆ, ಹೆಣ್ಣುಮಕ್ಕಳು ಇರುವುದಿಲ್ಲ. ನನ್ನ ಅಕ್ಕ ನಿರ್ಮಲ ಆಗಿರುತ್ತಾರೆ. ಸದರೀಯವರು ಈ ದಾವೆಯಲ್ಲಿ ಪೌತಿದಾರರಾಗಿರುತ್ತಾರೆ. 5 ನೇ ಪ್ರತಿವಾದಿ ಜೀವಂತ ಇರುತ್ತಾರೆ. ಚೌಡಮ್ಮರವರಿಗೆ ದಾನವಾಗಿ ಬಂದಿದ್ದ ಎಲ್ಲಾ ಆಸ್ತಿಗಳಿಗೆ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಒಂದು ಆಸ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ದಾಖಲು ಮಾಡಿರುತ್ತೇವೆ. ತೋಪಯ್ಯರವರಿಗೆ ಚೌಡಯ್ಯ ಎಂಬ ತಮ್ಮ ಇದ್ದಾನೆಂದರೆ ಸರಿ. ಅವನಿಗೆ ಕೆಂಪಯ್ಯ ಎಂಬ ಮೂರನೇ ಮಗ ಇದ್ದಾಗನೆಂದರೆ ಸರಿ. ದಿನಾಂಕಃ 28.12.1979 ರಂದು ಕೆಂಪಯ್ಯ ನಾರಾಯಣಗೌಡ ಎಂಬುವವರಿಗೆ ಸರ್ವೇ ನಂ 569/2 ರಲ್ಲಿ 46X15 ಅಡಿ ವಿಸ್ತೀರ್ಣದ ಜಾಗವನ್ನು ಕ್ರಯ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೊರಲಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

ಪ್ರಧಾನ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.